**ಇಂದು ದಿಃ23-01-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ **:**ಶ್ರೀ ವೈ.ಹೆಚ್.ಡಿ ವಕೀಲರಿಂದ **1** ರಿಂದ **3, 6** ಪ್ರತಿವಾದಿಯರ ಪರ**:**

ನಾನು ದಿನಾಂಕಃ26-05-2010 ರ, ದಿನಾಂಕಃ30-11-2009 ರ ಮೂಲ ಕ್ರಯಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಡಿ-3 ಮತ್ತು 4 ಎಂದು ಗುರುತಿಸಲಾಯಿತು.

ನಾನು ಬಂಗಾರದ ಮೇಲೆ ಸಾಲ ಪಡೆದ ಬಗ್ಗೆ ಒಂದು ಸಾಲದ ಖಾತೆಯ ಗಣಕೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ-5 ಎಂದು, ಬಸವನಗೌಡ ಈತನಿಗೆ ಸಂಬಂಧಿಸಿದ ಎ.ಜೆ. ಆಸ್ಪತ್ರೆಯ ಒಂದು Prescription ನಿ.ಡಿ-6 ಎಂದು, ಬಂಗಾರದ ಸಾಲ ಮರುಪಾವತಿ ಮಾಡಿದ ಬಗ್ಗೆ 3 ಚಲನ್ ಗಳನ್ನು ಒಟ್ಟಿಗೆ ನಿ.ಡಿ-7 ಎಂದು, ಕೆನರಾ ಬ್ಯಾಂಕ್ ನ 4 ಬಂಗಾರದ ಸಾಲದ ಕುರಿತು ಪಾಸ್ ಕಾರ್ಡ್ ಗಳನ್ನು ಒಟ್ಟಿಗೆ ನಿ.ಡಿ-8 ಎಂದು, ಕೆನರಾ ಬ್ಯಾಂಕ್ ನ ಒಂದು ನೋಟೀಸ್ ನ್ನು ನಿ.ಡಿ-9 ಎಂದು, ನನಗೆ ಸಂಬಂಧಿಸಿದ ಸಾಲ ಪಡೆದ ಬಗ್ಗೆ ಸಾಲದ ಖಾತೆಯ Account extract ಗಳನ್ನು ಒಟ್ಟಿಗೆ ನಿ.ಡಿ-10 ಎಂದು ಗುರುತಿಸಲಾಯಿತು.

ಪ್ರಾಥಮಿಕ ಸಹಕಾರಿ ಕೃಷಿ ಬ್ಯಾಂಕ್ ನ ಒಂದು ಸುಸ್ತಿ ತಗಾದೆ ಪತ್ರವನ್ನು ಸಾಲ ಮರುಪಾವತಿ ಮಾಡಿದ ಬಗ್ಗೆ ಹಾಜರುಪಡಿಸಿದ್ದು, ಅದನ್ನು ನಿ.ಡಿ-11 ಎಂದು, ಬಂಗಾರದ ಸಾಲ ಮರುಪಾವತಿ ಮಾಡಿದ ಬಗ್ಗೆ ಎಸ್.ಬಿ.ಐ ಬ್ಯಾಂಕ್ ನ ಒಂದು ಹಿಂಬರಹವನ್ನು ನಿ.ಡಿ-12 ಎಂದು, ಸಾಲ ತುಂಬಿದ ಬಗ್ಗೆ 8 ಚಲನ್ ಗಳನ್ನು ಒಟ್ಟಿಗೆ ನಿ.ಡಿ-13 ಎಂದು ಗುರುತಿಸಲಾಯಿತು.

1 ನೇ ಪ್ರತಿವಾದಿಗೆ ಸಂಬಂಧಿಸಿದಂತೆ ಆಸ್ಪತ್ರೆಯ ಖರ್ಚಿನ ರಶೀದಿಗಳನ್ನು ಮತ್ತು ಅಂತಿಮ ಬಿಲ್ ನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಿಗೆ ನಿ.ಡಿ-14

ಎಂದು, ವಾದಿಗೆ ಸಂಬಂಧಿಸಿದಂತೆ ಆತನಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ಆಸ್ಪತ್ರೆಯ ಔಷದಿಯ ಮತ್ತು ಖರ್ಚಿನ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಿಗೆ ನಿ.ಡಿ-15 ಎಂದು, ರಾಮನಗೌಡ ಈತನ ಕುರಿತು ಆಸ್ಪತ್ರೆಯ ಖರ್ಚಿನ ರಶೀದಿಗಳನ್ನು ಒಟ್ಟಿಗೆ ನಿ.ಡಿ-16 ಎಂದು, ನನಗೆ ಸಂಬಂಧಿಸಿದಂತೆ ಆಸ್ಪತ್ರೆಯ ಮತ್ತು ಔಷದೀಯ ಖರ್ಚಿನ ರಶೀದಿಗಳನ್ನು ಒಟ್ಟಿಗೆ ನಿ.ಡಿ-17 ಎಂದು, ಒಟ್ಟು ಕುಟುಂಬದ ಆದಾಯದಿಂದ ಒಟ್ಟು ಕುಟುಂಬದ ಸದಸ್ಯರ ಆಸ್ಪತ್ರೆಯ ಮತ್ತು ಔಷದೀಯ ಖರ್ಚ್ನನ್ನು ನೋಡಿಕೊಂಡ ಬಗ್ಗೆ ಇನ್ನು ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಿಗೆ ನಿ.ಡಿ-18 ಎಂದು ಗುರುತಿಸಲಾಯಿತು.

ಗ್ರಾಮಪಂಚಾಯತ್ ಬನ್ನಿಕೋಡು ಇವರ ಒಂದು ಹಿಂಬರಹವನ್ನು ನಿ.ಡಿ-19 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**